**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 7/2015**

**ದೋ.ಸಾ. : 14 ಫ್ರಾ.ಸಾ. : 16**

ಸಾಕ್ಷಿಯ ಹೆಸರು : ಠಾಕೇಶ್ವರ
ತಂದೆಯ ಹೆಸರು : ಕೃಷ್ಣಾ ಪಟಗಾರ
ವಯಸ್ಸು : 62 ವರ್ಷ
ಉದ್ಯೋಗ : ನಿವೃತ್ತ ಅಧೀಕ್ಷಕರು , ಶಿಕ್ಷಣ ಇಲಾಖೆ
ವಾಸ : ಕುಮಟಾ

**ದಿನಾಂಕಃ 04-04-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ</u>**

1. ನಾನು 2009 ರಿಂದ 2014 ರವರೆಗೆ ಅಕ್ಷರ ದಾಸೋಹ ವಿಭಾಗ , ತಾಲೂಕು ಪಂಚಾಯತಿ ಕುಮಟಾದಲ್ಲಿ ಪ್ರಥಮ ದರ್ಜೆ ಸಹಾಯಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನ್ಯಾಯಾಲಯದಲ್ಲಿ ಹಾಜರು ಇರುವ ಆರೋಪಿ ನನಗೆ ಪರಿಚಯ ಇದ್ದಾನೆ. ಆರೋಪಿ ನನ್ನ ಕಚೇರಿಯಲ್ಲಿ ನನಗೆ ಅಧಿಕಾರಿಯಾಗಿದ್ದರು. ನನಗೆ ಫಿರ್ಯಾದುದಾರ ರಾಮಾ ಬೀರಪ್ಪ ನಾಯ್ಕ ಗೊತ್ತು . ಫಿರ್ಯಾದುದಾರ ನಾನು ಆ ಕಚೇರಿಗೆ ಬಂದ ಎರಡು ವರ್ಷದ ನಂತರದಿಂದ ಶಾಲೆಗಳಿಗೆ ಕುಮಟಾದ ಉಗ್ರಾಣದಿಂದ / ಆಹಾರ ಗೋದಾಮಿನಿಂದ ಅಕ್ಕಿ , ಬೇಳೆ , ಎಣ್ಣೆ ಇತ್ಯಾದಿಯನ್ನು ಹಾಲನ್ನು ಸರಬರಾಜು ಮಾಡುತ್ತಿದ್ದ. ಹಾಲಿನ ಪುಡಿ ಸರಬರಾಜು ಮಾಡುತ್ತಿದ್ದ ಅದನ್ನು ಕೆ ಎಂ ಎಫ್ ಸಂಸ್ಥೆ ಸರಬರಾಜು ಮಾಡುತ್ತಿತ್ತು . ಫಿರ್ಯಾದಿ ಅದನ್ನು ವಿತರಣೆ ಮಾಡುತ್ತಿದ್ದ. ನಾನು ಫಿರ್ಯಾದಿ ಜೊತೆ ಹಾಗೂ ಆರೋಪಿ ಜೊತೆ ಮಾತನಾಡುತ್ತಿದ್ದೆ. ನನಗೆ ಅವರಿಬ್ಬರ ಧ್ವನಿ ಪರಿಚಯ ಇತ್ತು . ದಿನಾಂಕ 18.01.2014 ರಂದು ಕಾರವಾರದ ಲೋಕಾಯುಕ್ತ ಕಚೇರಿಗೆ ನನ್ನ ಮೇಲಾಧಿಕಾರಿಯವರು ನನ್ನನ್ನು ಕಳುಹಿಸಿದರು. ಅಲ್ಲಿಗೆ ಹೋದಾಗ ಲೋಕಾಯುಕ್ತ ಕಚೇರಿಯಲ್ಲಿ ಇಬ್ಬರು ಮೂವರು ಇದ್ದರು. ಈಗ ಅವರ ಹೆಸರು ನೆನಪಿಲ್ಲ. ರಾಮಾ ಬೀರಪ್ಪ ನಾಯ್ಕ ಆಗ ಹಾಜರು ಇದ್ದರು. ಉಳಿದವರ ಹೆಸರು ನೆನಪಿಲ್ಲ. ಆ ಸಮಯದಲ್ಲಿ ಲೋಕಾಯುಕ್ತ ಕಚೇರಿಯಲ್ಲಿ ಸಿ.ಡಿ. ಚಾಲು ಮಾಡಿ ಅದರಲ್ಲಿದ್ದ ಸಂಭಾಷಣೆಯನ್ನು ನನಗೆ ಕೇಳಿಸಿದರು. ನಾನು ಆ ಸಂಭಾಷಣೆ ಕೇಳಿ ಅದರಲ್ಲಿ ಧ್ವನಿಯನ್ನು

ಇವರದ್ದೇ ಇರಬಹುದು ಎಂದು ಗುರುತಿಸಿದೆ. ಅದರಲ್ಲಿ ಒಂದು ಧ್ವನಿ ನನ್ನ ಪ್ರಕಾರ ಫಿರ್ಯಾದುದಾರನದ್ದಾಗಿತ್ತು ಹಾಗೂ ಅದರಲ್ಲಿದ್ದ ಮತ್ತೊಂದು ಧ್ವನಿ ಆರೋಪಿ ಗಣೇಶ ನಾಯ್ಕರವರದ್ದಾಗಿತ್ತು . ಈಗ ಆ ಸಿ.ಡಿ. ಸಂಭಾಷಣೆಯನ್ನು ಕೇಳಿಸಿದರೆ ನಾನು ಗುರುತಿಸುತ್ತೇನೆ. (ಈಗ ವಸ್ತು ಸಂ. 10 ಎಂದು ಜಪ್ತಾಗಿರುವ ಮೊಹರಾದ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿ ಹಾಗೂ ಆತನ ವಕೀಲರ ಸಮಕ್ಷಮ ಅದಕ್ಕೆ ಹಾಕಿರುವ ಅರಗಿನ ಮೊಹರುಗಳನ್ನು ಪರಿಶೀಲಿಸಿ ಅವು ಸುಸ್ಥಿತಿಯಲ್ಲಿ ಇರುವುದನ್ನು ಖಾತ್ರಿ ಪಡಿಸಿಕೊಂಡು ನಂತರ ಆ ಲಕೋಟೆಯನ್ನು ತೆರೆಯಲಾಗಿದೆ. ಅದರಲ್ಲಿರುವ ಸಿ.ಡಿ. ಯನ್ನು ಹೊರ ತೆಗೆಯಲಾಗಿದೆ ). ಈಗ ನ್ಯಾಯಾಲಯದ ಲ್ಯಾಪಟಾಪ್ ಮತ್ತು ವಿ.ಸಿ. ಮಾನಿಟರ್ ಮೂಲಕ ಸದರಿ ಸಿ.ಡಿ. ಯನ್ನು ಚಾಲು ಮಾಡಿ ಅದರಲ್ಲಿರುವ ಸಂಭಾಷಣೆಯನ್ನು ತೆರೆದ ನ್ಯಾಯಾಲಯದಲ್ಲಿ ಕೇಳಿಸಿದ್ದು ಅದುವೇ ನನಗೆ ಲೋಕಾಯುಕ್ತ ಕಚೇರಿಯಲ್ಲಿ ಕೇಳಿಸಿದ ಮೇಲೆ ಹೇಳಿದ ಸಿ.ಡಿ. ಸಂಭಾಷಣೆಯಾಗಿದೆ. ಆ ಸಿ.ಡಿ. ಯನ್ನು ಮು.ಮಾ. 11 ಎಂದು ಈಗಾಗಲೇ ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ವಿ ಎನ್ ರವರಿಂದ**

2. ನಾನು ಧ್ವನಿ ತಜ್ಞ ಅಲ್ಲ. ಆ ಸಿ.ಡಿ. ಯನ್ನು ದಿನಾಂಕ 18.01.2014 ರಂದು ನನಗೆ ಲ್ಯಾಪಟಾಪ್ ನಲ್ಲಿ ಹಾಕಿ ಅದರಲ್ಲಿದ್ದ ಸಂಭಾಷಣೆಯನ್ನು ಕೇಳಿಸಿದ್ದಾರೆ. ಆಗ ಮಧ್ಯಾಹ್ನದ ಸಮಯ ಆಗಿತ್ತು . ಲೋಕಾಯುಕ್ತ ಕಚೇರಿಯಲ್ಲಿ ಅದನ್ನು ಕೇಳಿಸಿದರು. ನಾನು ಕಚೇರಿಯಿಂದ ಹೊರಗಡೆ ಬೇರೆ ಕಾರ್ಯಕ್ಕೆ ಹೋಗಬೇಕಾದರೆ ಕಚೇರಿಯಲ್ಲಿ ವಹಿಯಲ್ಲಿ ನಮೂದಿಸುತ್ತೇನೆ ಎಂದರೆ ಮೇಲಾಧಿಕಾರಿಯವರ ಅನುಮತಿ ಪಡೆದು ಹೋಗುತ್ತೇನೆ. ಈ ಪ್ರಕರಣದಲ್ಲಿ ನಾನು ಮೇಲಾಧಿಕಾರಿಯವರ ಅನುಮತಿ ಪಡೆದಿದ್ದೆನಾ ಎಂದರೆ ಮೇಲಾಧಿಕಾರಿಯವರು ಹೇಳಿದ ಕಾರಣವೇ ನಾನು ಹೋಗಿರುತ್ತೇನೆ. ಈಗ ನ್ಯಾಯಾಲಯದಲ್ಲಿ ಕೇಳಿಸಿದ ಮು.ಮಾ. 11 ಸಿ.ಡಿ. ಯಲ್ಲಿರುವ ಧ್ವನಿಗಳಲ್ಲಿ ಬೇರೆ ಶಬ್ದ ಇದೆ ಮತ್ತು ಗೊಂದಲ ಇದೆ ಎಂದರೆ ಹೌದು . ಅದರಲ್ಲಿ ಯಾವ ಧ್ವನಿ ಯಾರದ್ದು ಎಂದು ಸ್ಪಷ್ಟವಾಗಿ ಗೊತ್ತಾಗುವುದಿಲ್ಲ ಎಂದರೆ ಒಂದೊಂದು ಬಾರಿ ಕರ್ಕಶವಾಗಿ ಕೇಳಿಸುತ್ತದೆ ಸರಿಯಾಗಿ ಗೊತ್ತಾಗುವುದಿಲ್ಲ. ಇಂತಹವರದ್ದೇ ಧ್ವನಿ ಎಂದು ನಿಖರವಾಗಿ ನನಗೆ ಹೇಳಲು ಆಗುವುದಿಲ್ಲ ಎಂದರೆ ಹೌದು ಅಂದಾಜಿನ ಮೇಲೆ ಹೇಳಿರುತ್ತೇನೆ. ಒಬ್ಬರ ಧ್ವನಿಯನ್ನು ಇನ್ನೊಬ್ಬರು

ಅನುಕರಿಸಲು ಬರುತ್ತದೆ ಎಂದರೆ ಹೌದು . ಕೆಲವು ಬಾರಿ ಒಬ್ಬರ ಧ್ವನಿಯಂತೆ ಇನ್ನೊಬ್ಬರ ಧ್ವನಿ ಕೇಳಿಸುತ್ತದೆ ಎಂದರೆ ಹೌದು . ಲೋಕಾಯುಕ್ತ ಕಚೇರಿಯಲ್ಲಿ ನಾನು ನಿಖರವಾಗಿ ಧ್ವನಿ ಇವರದ್ದೇ ಎಂದು ಗುರುತಿಸಿ ಹೇಳಿಲ್ಲ ಎಂದರೆ ಇರಬಹುದು ಎಂದು ಹೇಳಿರುತ್ತೇನೆ. ಆ ದಿನ ನನಗೆ ಲೋಕಾಯುಕ್ತ ಕಚೇರಿಯಲ್ಲಿ ಕೇಳಿಸಿದ ಸಿ.ಡಿ. ಸಂಭಾಷಣೆಯಲ್ಲಿ ಸಹ ಕರ್ಕಶ ಶಬ್ದ ಇತ್ತು ಎಂದರೆ ಸ್ವಲ್ಪ ಇತ್ತು ಆದರೆ ಈ ದಿನ ಇದ್ದಷ್ಟು ಇರಲಿಲ್ಲ. ಈ ದಿನ ಜಾಸ್ತಿ ಕರ್ಕಶ ಶಬ್ದ ಇದೆ ಎಂದು ನಾನು ಹೇಳಿರುವುದರಿಂದ ಈ ದಿನ ಚಾಲು ಮಾಡಿ ತೋರಿಸಿದ ಸಿ.ಡಿ. ನನಗೆ ಆ ದಿನ ಕೇಳಿಸಿದ ಸಿ.ಡಿ. ಅಲ್ಲ ಎಂದರೆ ನಾನು ಸಿ.ಡಿ. ಯನ್ನು ಹೊರಗಡೆ ನೋಡಲಿಲ್ಲ ಅದನ್ನು ಲ್ಯಾಪಟಾಪ್ ಒಳಗಡೆ ಹಾಕಿದ್ದರು.

3. ರಾಮಾ ಬೀರಪ್ಪ ನಾಯ್ಕುರವರಿಗೆ ಹಾಲಿನ ಪುಡಿ ಸರಬರಾಜು ಮಾಡಲು ಯಾವುದೇ ಆದೇಶ ಇರಲಿಲ್ಲ ಎಂದರೆ ಇರಬಹುದು . ಸರ್ಕಾರಿ ಕೆಲಸ ಮಾಡುವಾಗ ಫಿರ್ಯಾದುದಾರ ಒಬ್ಬನೇ ಅಲ್ಲದೇ ಅನೇಕರು ಸರ್ಕಾರಿ ಕಚೇರಿಗೆ ಬಂದು ಹೋಗುತ್ತಿರುತ್ತಾರೆ ಎಂದರೆ ಹೌದು . ಮೇಲ್ಕಂಡ ಸಿ.ಡಿ. ಯನ್ನು ಲೋಕಾಯುಕ್ತ ಪೊಲೀಸ್ ನವರು ಎಂದೂ ನನಗೆ ಚಾಲು ಮಾಡಿ ಕೇಳಿಸಿಲ್ಲ ಎಂದರೆ ಸರಿಯಲ್ಲ. ನಾನು ಅದರಲ್ಲಿ ಧ್ವನಿ ಇಂತಹವರದ್ದೇ ಎಂದು ಗುರುತು ಮಾಡಿಲ್ಲ ಎಂದರೆ ಅಂದಾಜಿನ ಮೇಲೆ ಮಾಡಿರುತ್ತೇನೆ. ನಾನು ಪೊಲೀಸ್ ನವರ ಮಾತು ಕೇಳಿ ಅವರಿಗೆ ಹೆದರಿಕೊಂಡು ನನ್ನ ಮೇಲೆ ಸುಳ್ಳು ಕೇಸು ಹಾಕಬಹುದು ಎಂದು ಹೆದರಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ಕೇಸಿನ ಸಿ.ಡಿ. ಯಲ್ಲಿರುವ ಧ್ವನಿ ಆರೋಪಿಯದ್ದು ಅಲ್ಲ ಎಂದರೆ ಆರೋಪಿಯ ಧ್ವನಿಯ ರೀತಿ ಇದೆ. ಆದರೆ ಆರೋಪಿಯದ್ದೇ ಎಂದು ಖಚಿತವಾಗಿ ಹೇಳಲು ಆಗುವುದಿಲ್ಲ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ